Tel.No. : 2419361
Fax: 0821-2419363/2419301

e-mail : registrar@uni-mysore.ac.in
www.uni-mysore.ac.in

**UNIVERSITY OF MYSORE**

**Estd.1916**

VishwavidyanilayaKaryasoudha
Crawford Hall, Mysore 570 005

**(Re-accredited by NAAC at "A" Grade with a CGPA of 3.47)**
**(Ranked 57th overall and 36th among Universities in NIRF ranking 2017)**

ಸಂಖ್ಯೆ:ಪಿ.ಎಂ.ಇ.ಬಿ./08/RUSA 2.0/2018-19/483 ದಿನಾಂಕ:31.01.2019

## ಸುತ್ತೋಲೆ

ವಿಷಯ: ದಿನಾಂಕ 03.02.2019 ರಂದು ಮೈಸೂರು ವಿಶ್ವವಿದ್ಯಾನಿಲಯಲ್ಲಿ ವೃತ್ತಿ ಜೀವನ ಕೇಂದ್ರವನ್ನು ಸ್ಥಾಪಿಸುವ ಸಮಾರಂಭದಲ್ಲಿ ಭಾಗವಹಿಸುವ ಬಗ್ಗೆ.

*****

ರೂಸಾ 2.0 ಯೋಜನೆಯ ಸಂಶೋಧನೆ, ಆವಿಷ್ಕಾರ ಮತ್ತು ಗುಣಮಟ್ಟ ಅಭಿವೃದ್ಧಿ ಅನುದಾನದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ವಿಶ್ವವಿದ್ಯಾನಿಲಯ ವೃತ್ತಿ ಜೀವನ ಕೇಂದ್ರವನ್ನು" (University Career Hub) ಸ್ಥಾಪಿಸಲಾಗುತ್ತಿದ್ದು, ದಿನಾಂಕ 03.02.2019 ರಂದು ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಡಿಜಿಟಲ್ ಮಾಧ್ಯಮದ ಮೂಲಕ ಉದ್ಘಾಟಿಸಲಿದ್ದಾರೆ. ಈ ಪ್ರಯುಕ್ತ ಉದ್ಘಾಟನಾ ಸಮಾರಂಭವನ್ನು ರಾಣಿ ಬಹದ್ದೂರ್ ಸಭಾಂಗಣ, BIMS, ಮಾಸಗಂಗೋತ್ರಿ, ಮೈಸೂರು ಇಲ್ಲಿ ಮಧ್ಯಾಹ್ನ 3.00 ಘಂಟೆಗೆ ಏರ್ಪಡಿಸಲಾಗಿದೆ.

ಶ್ರೀ.ಜಿ.ಟಿ.ದೇವೇಗೌಡ, ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಇವರು ಮುಖ್ಯ ಅತಿಥಿಗಳಾಗಿದ್ದು, ಶ್ರೀ. ಸಾ.ರಾ.ಮಹೇಶ್, ಸನ್ಮಾನ್ಯ ಪ್ರವಾಸೋಧ್ಯಮ ಹಾಗೂ ರೇಷ್ಮೆಕೃಷಿ ಸಚಿವರು ಹಾಗೂ ಶ್ರೀ ಪ್ರತಾಪ ಸಿಂಹ, ಸನ್ಮಾನ್ಯ ಲೋಕಸಭಾ ಸದಸ್ಯರು, ಕೇಂದ್ರ ಸರ್ಕಾರ, ಇವರು ಗೌರವ ಅತಿಥಿಗಳಾಗಿ ಆಗಮಿಸುತ್ತಿದ್ದಾರೆ.

"ವಿಶ್ವವಿದ್ಯಾನಿಲಯ ವೃತ್ತಿ ಜೀವನ ಕೇಂದ್ರವನ್ನು" (University Career Hub) ಸ್ಥಾಪಿಸುವ ಸಮಾರಂಭಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಾಪಕರು/ಸಂಶೋಧಕರು/ ವಿದ್ಯಾರ್ಥಿಗಳು/ ಬಟವಾಡೆ ಅಧಿಕಾರಿಗಳು/ ಅಧ್ಯಾಪಕೇತರರೂ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ.

31/1/19

ಕುಲಸಚಿವರು

ಇವರಿಗೆ:

1. ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗಗಳ ಅಧ್ಯಕ್ಷರು ಹಾಗೂ ವಿವಿಧ ಕೇಂದ್ರ / ಸಂಸ್ಥೆಗಳ ನಿರ್ದೇಶಕರು/ ಸಂಯೋಜಕರು, ಮಾನಸಗಂಗೋತ್ರಿ, ಮೈಸೂರು
2. ನಿರ್ದೇಶಕರು ಸ್ನಾತಕೋತ್ತರ ಕೇಂದ್ರ ಹಾಸನ/ಮಂಡ್ಯ/ಚಾಮರಾಜ ನಗರ
3. ಎಲ್ಲಾ ಬಟವಾಡೆ ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
4. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಘಟಕ ಕಾಲೇಜುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

(1–4:) ಸದರಿ ಸುತ್ತೋಲೆಯನ್ನು ಎಲ್ಲಾ ಅಧ್ಯಾಪಕರು/ಅಧ್ಯಾಪಕೇತರರು/ ಸಂಶೋಧಕರೂ ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ತರಲು ಕೋರಲಾಗಿದೆ.

5. ಸಂಯೋಜಕರು, ಐ.ಸಿ.ಡಿ., ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು- ಸದರಿ ಸುತ್ತೋಲೆಯನ್ನು ವಿಶ್ವವಿದ್ಯಾನಿಲಯದ ವೆಬ್ ಸೈಟ್‌ನಲ್ಲಿ ಪ್ರಚುರಪಡಿಸಲು ಕೋರಲಾಗಿದೆ.
6. ಎಲ್ಲಾ ಉಪ/ ಸಹಾಯಕ ಕುಲಸಚಿವರು/ ಅಧೀಕ್ಷಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
7. ಕುಲಪತಿಗಳು/ಕುಲಸಚಿವರು/ ಕುಲಸಚಿವರು (ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು ಇವರುಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕಛೇರಿ ಪ್ರತಿ

Univ. Career Hub.bsg